# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಡಳಿತಾಧಿಕಾರಿಗಳ ಕಛೇರಿ, ಗಾ.ಕೃ.ವಿ.ಕೇ., ಬೆಂಗಳೂರು - 560 065


ಸಂಖ್ಯೆ:ಆ.ಕ./ಸಾಮಾನ್ಯ-II/ರೈ.ಸಂ.ಕೇ.,/2022-23 ದಿನಾಂಕ: 20-04-2022

## ಸುತ್ತೋಲೆ

**ವಿಷಯ:** ಕರ್ನಾಟಕ ರಾಜ್ಯ ರೈತ ಸಂಪರ್ಕ ಕೇಂದ್ರಗಳಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಭೇಟಿ ನಿಡುವ ಕುರಿತು.

**ಉಲ್ಲೇಖ:**
1. ಆದೇಶ ಸಂಖ್ಯೆ:ಆಕ/ಸಾಮಾನ್ಯ/ರೈ.ಸಂ.ಕೇ.-ನೋ.ಅ. & ವಿಜ್ಞಾನಿ/2020-21 ದಿನಾಂಕ: 31-07-2021
2. ದಿನಾಂಕ 18-02-2022ರಂದು ನಡೆದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಭೆಯ ನಡಾವಳಿಗಳು
3. ಕುಲಪತಿಗಳು, ಕೃವಿವಿ, ಗಾ.ಕೃ.ವಿ.ಕೇ., ಬೆಂಗಳೂರು ರವರ ಅನುಮೋದನೆ ದಿನಾಂಕ 19-04-2022

********************

ಮಾನ್ಯ ರಾಜ್ಯ ಸರ್ಕಾರ ಕೃಷಿ ವಿಶ್ವವಿದ್ಯಾನಿಲಯಗಳಿಂದ ಅಭಿವೃದ್ಧಿಗೊಳಿಸಲಾಗುವ ನೂತನ ತಳಿಗಳ ಮತ್ತು ತಂತ್ರಜ್ಞಾನಗಳ ಪ್ರಚಾರದ ಉದೇಶಕ್ಕಾಗಿ; ನೂತನ ತಳಿಗಳ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು, ರೈತರ ಜಮೀನುಗಳಲ್ಲಿ ಸಂಶೋಧನೆ ಕೈಗೊಳ್ಳುವುದು; ರೈತರಿಗೆ ಸಲಹೆಗಳನ್ನು ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಕೃಷಿ ವಿಶ್ವವಿದ್ಯಾನಿಲಯದ ಒಬ್ಬ ಅಧಿಕಾರಿಯನ್ನು ಆಯಾ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಿಗೆ "ನೋಡಲ್ ಅಫೀಸರ್"ಗಳನ್ನಾಗಿ ಹಾಗೂ ಪ್ರತಿ ರೈತ ಸಂಪರ್ಕ ಕೇಂದ್ರಗಳಿಗೆ ಒಬ್ಬ ವಿಜ್ಞಾನಿ/ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು /ಸಹಾಯಕ ಪ್ರಾಧ್ಯಾಪಕರುಗಳನ್ನು ನೇಮಿಸಿ ಉಲ್ಲೇಖ-1ರಂತೆ ಆದೇಶ ಹೊರಡಿಸಿರುತ್ತದೆ. ಸದರಿ ನೋಡಲ್ ಆಫೀಸರ್‌ಗಳು ಹಾಗೂ ವಿಜ್ಞಾನಿ/ಪ್ರಾಧ್ಯಾಪಕರು /ಸಹ ಪ್ರಾಧ್ಯಾಪಕರು /ಸಹಾಯಕ ಪ್ರಾಧ್ಯಾಪಕರುಗಳನ್ನು ಮೊದಲನೇ ಮತ್ತು ಮೂರನೇ ವಾರದ ಸೋಮವಾರದ ದಿನದಂದು ನಡೆಯುವ ರೈತ ಸಂಪರ್ಕ ಸಭೆಯಲ್ಲಿ ಭಾಗವಹಿಸಲು ಉಲ್ಲೇಖ-1ರಂತೆ ಆದೇಶ ನೀಡಲಾಗಿರುತ್ತದೆ.

ಈ ಸಂಬಂಧ ನೀಯೋಜನೆಗೊಂಡ ನೋಡಲ್ ಅಫೀಸರ್ ವಿಜ್ಞಾನಿ/ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು /ಸಹಾಯಕ ಪ್ರಾಧ್ಯಾಪಕರುಗಳು ತಮ್ಮ ನಿಯೋಜಿತ ರೈತ ಸಂಪರ್ಕ ಕೇಂದ್ರಗಳಿಗೆ ತೆರಳಲು ವಿಶ್ವವಿದ್ಯಾನಿಲಯದಲ್ಲಿ ಅನುದಾನದ ಕೊರತೆಯಿರುವುದರಿಂದ, ಬಾಡಿಗೆ ವಾಹನಗಳಲ್ಲಿ ಪ್ರಯಾಣಿಸುವುದನ್ನು ಸ್ಥಗಿತಗೊಳಿಸಿ, ನಿಯಮಾವಳಿಗಳ ಪ್ರಕಾರ ಪ್ರಯಾಣ ಮಾಡಿ ಅವರವರ ಅರ್ಹತೆಯ ಆಧಾರದ ಮೇಲೆ ಪ್ರಯಾಣ ಮತ್ತು ದಿನ ಭತ್ಯೆಗಳನ್ನು ಸಂಬಂಧಪಟ್ಟ ಕಛೇರಿ/ನಿರ್ದೇಶನಾಲಯಗಳಿಂದ ಪಡೆಯಬಹುದು ಎಂದು ಈ ಮೂಲಕ ಸೂಚಿಸಲಾಗಿದೆ.

ಆದೇಶದ ಮೇರೆಗೆ

ಆಡಳಿತಾಧಿಕಾರಿಗಳು

ಇವರಿಗೆ

1. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ.
2. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಡಳಿತವ್ಯಾಪ್ತಿಗೆ ಒಳಪಡುವ ಎಲ್ಲಾ ಜಿಲ್ಲೆಗಳ ರೈತ ಸಂಪರ್ಕ ಕೇಂದ್ರಗಳ ನೋಡಲ್ ಅಧಿಕಾರಿಗಳಿಗೆ
3. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಸಂಶೋಧನಾ ಕೇಂದ್ರಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಮುಖ್ಯಸ್ಥರುಗಳಿಗೆ
4. ಕೃಷಿ ಮಹಾವಿದ್ಯಾಲಯಗಳ ಎಲ್ಲಾ ವಿಭಾಗೀಯ ಮುಖ್ಯಸ್ಥರುಗಳಿಗೆ
5. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಯೋಜನಾ ಮುಖ್ಯಸ್ಥರುಗಳಿಗೆ.

ಎಲ್ಲಾ ಅಧಿಕಾರಿಗಳು ಮೇಲೆ ತಿಳಿಸಿರುವ ವಿಷಯವನ್ನು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳಿಗೆ ನಿಯೋಜನೆಗೊಂಡಿರುವ ಬೋಧಕ ವರ್ಗ ಸಿಬ್ಬಂದಿಗಳಿಗೆ ಗಮನಕ್ಕೆ ತರುವುದು.

ಪ್ರತಿಗಳು

1. ಕುಲಪತಿಗಳ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃವಿವಿ, ಗಾ.ಕೃ.ವಿ.ಕೇ., ಬೆಂಗಳೂರು ಇವರ ಮಾಹಿತಿಗಾಗಿ
2. ಕಛೇರಿಯ ಕಡತಕ್ಕೆ.